ಅ.ದಾ. ಸಂಃ 219/2019 ಸಿ.ಡಬ್ಲ್ಯು 01

ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

ಓ.ಎಸ್ ನಂ. **219/2019**

ದಿಃ **25-03-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | ನಾಗೇಶ್ | ಸಿ.ಡಬ್ಲ್ಯೂ | **01** |
| ವಯಸ್ಸು | 56 ವರ್ಷ | | |
| ತಂದೆಯ / ಗಂಡನ ಹೆಸರು | ಬಿ.ಜಿ ರಂಗಯ್ಯ | | |
| ವೃತ್ತಿ | ಎ.ಡಿ.ಎಲ್.ಆರ್ | | |
| ವಾಸಸ್ಥಳ | ಗೌರಿಬಿದನೂರು | | |

ಮುಖ್ಯ ವಿಚಾರಣೆಃಃ

ನಾನು ಗೌರಿಬಿದನೂರು ತಾಲ್ಲೂಕಿನಲ್ಲಿ 8 ತಿಂಗಳಿಂದ ಭೂ ದಾಖಲೆಗಳ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ವಾದಿ ಮತ್ತು ಪ್ರತಿವಾದಿಯ ಆಸ್ತಿಗಳನ್ನು ಅಳತೆ ಮಾಡಿ ವರದಿ ಸಲ್ಲಿಸಲು ನ್ಯಾಯಾಲಯದಿಂದ ನಮ್ಮ ಕಚೇರಿಗೆ ವಾರಂಟ್ ಬಂದಿದ್ದು, ಅದರಂತೆ ನಾನು ವಾರಂಟ್ ಅನ್ನು ಪರಿಶೀಲಿಸಿ ನಂತರ ಉಭಯಪಕ್ಷಗಾರರಿಗೆ ದಿನಾಂಕ 16-09-2025 ರಂದು ನೋಟೀಸ್ ಅನ್ನು ಕೊಟ್ಟಿರುತ್ತೇನೆ. ಸಾಕ್ಷಿಗೆ ವಾರಂಟ್ ಅನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿನಾಂಕ 09-09-2025 ರ ನೋಟೀಸನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಸಿ-2 ಎ ಎಂದು ಗುರುತಿಸಲಾಯಿತು.

ನಂತರ ಪಕ್ಷಗಾರರ ಆಸ್ಗಿಗಳಿಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ಪರಿಶೀಲನೆ ಮಾಡಿ ನಂತರ ಸದರಿ ಆಸ್ತಿಗಳ ಸ್ಥಳಕ್ಕೆ ನಾನು ಮತ್ತು ನಮ್ಮ ಕಚೇರಿಯ ಸರ್ವೇಯರ್ ಆದಂತಹ ಮಂಜುನಾಥ್ ರೆಡ್ಡಿ ರವರೊಂದಿಗೆ ಹೋಗಿ ಇಬ್ಬರು ಪಕ್ಷಗಾರರ ಸಮಕ್ಷಮ ಸರ್ವೆ ನಂ.240 ಮತ್ತು 241 ರ ಆಸ್ತಿಗಳನ್ನು ಅಳತೆ ಮಾಡಿ

ಗಡಿಗಳನ್ನು ಗುರುತಿಸಿರುತ್ತೇನೆ. ಯಾವುದೇ ಒತ್ತುವರಿ ಕಂಡು ಬಂದಿರುವುದಿಲ್ಲ. ಅದರಂತೆ ನಾನು ನಕ್ಷೆಯನ್ನು ತಯಾರು ಮಾಡಿರುತ್ತೇನೆ. ಸಾಕ್ಷಿಗೆ ಒಂದು ನಕ್ಷೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಸಿ-3 ಎ ಎಂದು ಗುರುತಿಸಲಾಯಿತು. ಸದರಿ ಆಸ್ತಿಗಳಲ್ಲಿನ ಕೊಳವೆ ಬಾವಿಯನ್ನೂ ಸಹ ಗುರುತಿಸಿರುತ್ತೇನೆ. ಸ್ಥಳ ತನಿಖೆಯ ನಂತರ ಆ ಪ್ರಕಾರ ನಾನು ನ್ಯಾಯಾಲಯಕ್ಕೆ ನನ್ನ ವರದಿಯನ್ನು ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಗೆ ಹೇಳಿಕೆ ಮತ್ತು ವರದಿಯನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಸಿ-4 ಮತ್ತು 5 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಸಿ-4 ಸಿ ಮತ್ತು 5 ಸಿ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ವಾದಿಯ ಪರ ಶ್ರೀ ವಿ.ಸಿ.ಜಿ ವಕೀಲರಿಂದಃ</u>

ನಾವು ಬೆಳಗ್ಗೆ 11.00 ಗಂಟೆಗೆ ಸ್ಥಳಕ್ಕೆ ಹೋಗಿದ್ದೆವು. ನನ್ನೊಂದಿಗೆ ನಮ್ಮ ಕಚೇರಿಯ ಸರ್ವೇಯರ್ ಇದ್ದರು. ಸದರಿ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಯ ದೊಡ್ಡಪ್ಪನ ಮಗ ಜಿ. ನಾಗರಾಜು ಹಾಜರಿದ್ದರು. ನೋಟೀಸನ್ನು ವಾದಿ ಮತ್ತು ಪ್ರತಿವಾದಿಗೆ ಕೊಟ್ಟಿದ್ದೆವು. ಅನಾರೋಗ್ಯದ ಕಾರಣಕ್ಕಾಗಿ ಪ್ರತಿವಾದಿ ಬಂದಿರಲಿಲ್ಲ. ಪ್ರತಿವಾದಿಗೆ ಆರೋಗ್ಯ ಸರಿಇಲ್ಲ ಎಂದು ನಾಗರಾಜ್ ರವರು ನನಗೆ ತಿಳಿಸಿದರು. ಸದರಿ ನಾಗರಾಜ್ ಪ್ರತಿವಾದಿಯ ದೊಡ್ಡಪ್ಪನ ಮಗ. ಅನಾರೋಗ್ಯಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆಗಳನ್ನು ಕೇಳಿಲ್ಲ ಮತ್ತು ಪರಿಶೀಲಿಸಿಲ್ಲ. ಸದರಿ ದಿನ ಪ್ರತಿವಾದಿ ಗ್ರಾಮದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಪ್ರತಿವಾದಿ ಶಾಮೀಲಾಗಿದ್ದೇವೆ ಎಂದರೆ ಸರಿಯಲ್ಲ. ನಿಸಿ-4 ಅನ್ನು ನಮ್ಮ ಸರ್ವೇಯರ್ ಬರೆದಿರುತ್ತಾರೆ. ನಿಸಿ-4 ಅನ್ನು ನಾನೇ ಸ್ವತಃ ಬರೆಯಬೇಕು ಎಂದರೆ ಸಾಕ್ಷಿಯು ಸದರಿ ಸರ್ವೇಯರ್ ನಮ್ಮ ಇಲಾಖಲೆಯ ಸಿಬ್ಬಂದಿಯಾದ್ದರಿಂದ ಅವರ ಕೈಯಲ್ಲೇ ಬರೆಸಿರುವುದಾಗಿ ನುಡಿಯುತ್ತಾರೆ. ನಿಸಿ-3 ಅನ್ನು ಸರ್ವೇಯರ್ ತಯಾರು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಸಿ-3 ಮತ್ತು 4 ಅನ್ನು ತಾನು ಪರಿಶೀಲಿಸಿ ಸಹಿ ಮಾಡಿರುವುದಾಗಿ ನುಡಿಯುತ್ತಾರೆ. ನಾನು ನ್ಯಾಯಾಲಯದಿಂದ ಕಮಿಷನರ್ ಆಗಿ ನೇಮಕಗೊಂಡಿರುವುದರಿಂದ ನಿಸಿ-3 ಮತ್ತು 4 ಅನ್ನು ನಾನೇ

ತಯಾರಿಸಬೇಕು ಎಂದರೆ ಸಾಕ್ಷಿಯು ತಾನು ಸ್ಥಳಕ್ಕೆ ಹೋಗಿ ಸ್ಥಳ ತನಿಖೆ ಮಾಡಿರುವುದಾಗಿ ಹಾಗೂ ಸದರಿ ಸರ್ವೇಯರ್ ತಮ್ಮ ಇಲಾಖೆಯ ಸಿಬ್ಬಂದಿಯಾದ್ದರಿಂದ ತನ್ನ ತನಿಖೆಗೆ ಅವರ ಸಹಾಯ ಪಡೆದಿರುವುದಾಗಿ ನುಡಿಯುತ್ತಾರೆ. ನಾನು ಯಾವುದೇ ಸ್ಥಳ ತನಿಖೆ ಮಾಡದೇ ಭೂ ಮಾಪಕರು ತಯಾರು ಮಾಡಿದ ದಾಖಲೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಸಮಕ್ಷಮ ನಾವು ಸ್ಥಳ ತನಿಖೆ ನಡೆಸಿಲ್ಲ ಎಂದರೆ ಸರಿಯಲ್ಲ. ವಾದಿಯ ಸೂಚನಾವಳಿಗಳನ್ನು ಪಾಲಿಸಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯದ ಆದೇಶದಂತೆ ಸ್ಥಳ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ಟಿಪ್ಪಣಿ ದಾಖಲೆಗಳಿಗೆ ಅನುಗುಣವಾಗಿ ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಸ್ಥಳದ ಮರುತನಿಖೆ ಮಾಡಬೇಕು ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದರು.</u>

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು